BKN-35-V

Sl.No. :

Total No. of Pages : 3

ತೃತೀಯ ವರ್ಷದ ಬಿ.ಎ. ಪದವಿ ಪರೀಕ್ಷೆ, ಮೇ/ಜೂನ್ - 2026

(SLM Scheme)

ಐಚ್ಛಿಕ ಕನ್ನಡ (ಪತ್ರಿಕೆ–೫)

ಹಳಗನ್ನಡ ವ್ಯಾಕರಣ (ಶಬ್ದಮಣಿದರ್ಪಣಂ) ಮತ್ತು ಕನ್ನಡ ಭಾಷೆಯ ಚರಿತ್ರೆ

ಸಮಯ : 3 ಗಂಟೆಗಳು **ಗರಿಷ್ಠಾಂಕಗಳು : 80**

ಸೂಚನೆ : *ಎಲ್ಲಾ ಪ್ರಧಾನ ಪ್ರಶ್ನೆಗಳೂ ಕಡ್ಡಾಯ.*

ವಿಭಾಗ–ಎ

(ಹಳಗನ್ನಡ ವ್ಯಾಕರಣ (ಶಬ್ದಮಣಿದರ್ಪಣಂ): (20 ಅಂಕಗಳು)

ಪ್ರ1) ಎರಡು ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ: **[2×5=10]**

೧) ಪದನೆರಡು ಪಲವು ಮೇಣ್ ಪರ
ಪದಾರ್ಥಮಂ ಬಯಸುತಿರೆ ಬಹುವ್ರೀಹಿ ಪದಾ
ರ್ಥದ ಗಡಣಂ ದ್ವಂದ್ವಮೆನಿ
ಪ್ಪುದವ್ಯಮೀಭಾವಮಾದಿಪದ ಮುಖ್ಯತೆಯಿರಿ.

೨) ಕ್ಷಿತಿಯೊಳೆ ರೂಢಾನ್ವರ್ಥಂ
ಕಿತಮೆಂದಾ ನಾಮಮಱಿಗೆ ಮೂದೆಱನಸಮಾ
ಸತೆಯೊಳ್ ನೆಲಸಿರ್ಪುದು ನಿ
ಶ್ಚಿತನಾಮಂ ಪಂಚವರ್ಣಕೃತ ಪರಿಮಾಣಂ.

೩) ಅನುಕೂಲಪವನನಿಂ ಜೀ
ವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂ
ಗಿನವೊಲ್ ಶಬ್ದದ್ರವ್ಯಂ
ಜನಿಯಿಸುಗುಂ ಶ್ವೇತಮದಱ ಕಾರ್ಯಂಶಬ್ದ.

೪) ಪದಯುಗದ ಸಂಧಿಯಂ ಬೇ
ಱದೊಂದ ಸಹ್ಯೋಕ್ತಿ ಪುಟ್ಟಿಮಾಡುವುದಂ ಮಾ
ರ್ಗದೊಳುಳ್ಳ ಸಂಧಿಯಂ ಕಿಡಿ
ಪುದು ಮಾಗದು ತಾಂ ಯಥೇಷ್ಟಮೆಂದಱಿವುಳ್ಳರ್.

ಪ್ರ2) ಎರಡು ಸೂತ್ರ ವಾಕ್ಯಗಳನ್ನು ವಿವರಿಸಿ: **[2×2½=5]**

೧) ಸ್ವರಾಂಗಮುಂ ವ್ಯಂಜನಾಂಗಮುಂ ತಾವೆಂಬರ್

೨) ಕುಳದ ನಿಯಮದೊಳೆಂದುಂ ಕ್ಷಳಕ್ಕೆ ಲಾಕ್ಷರ ವಿಕಲ್ಪಮಿಲ್ಲ

೩) ದ್ವಿವಚನಯುಚಿತದೆ ಬರ್ಕುಂ

೪) ಸಂಧಿಸಿಮಮಿಂಕೆಯದದೊಳ್ಳೆಂದಿರ್ಪುವು.

ಪ್ರ3) ಎರಡರ ವ್ಯಾಕರಣ ವಿಶೇಷ ಬರೆಯಿರಿ: **[2×2½=5]**

೧) ಸಿಂಹಕ್ಕೆ ಶೌರ್ಯಂ, ಕಪಿಗೆ ಚಪಳತೆ

೨) ಅಯ್ಯೋ ಅಕ್ಕಟಾ ಇಂದ್ರಂಗೆ ಕೇಡಾಯ್ತೆ

೩) ಆನೆಯೋ ಅದ್ರಿಯೋ

೪) ಕರಡೆಯ ಗಿರ್ಗಟದ ದನಿಯವೊಲವಾರದವೆಂದುಂ

ವಿಭಾಗ–ಬಿ

(ಹಳಗನ್ನಡ ವ್ಯಾಕರಣ (ಶಬ್ದಮಣಿದರ್ಪಣಂ): (30 ಅಂಕಗಳು)

ಪ್ರ4) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) ವ್ಯಾಕರಣ ಎಂದರೇನು? ಕನ್ನಡ ವ್ಯಾಕರಣದ ಇತಿಹಾಸವನ್ನು ಪರಿಚಯಿಸಿ.

೨) ಕೇಶಿರಾಜ ಉಲ್ಲೇಖಿಸುವ ಕನ್ನಡದ ಅಸಾಧಾರಣ ಲಕ್ಷಣಗಳನ್ನು ವಿವರಿಸಿ.

ಪ್ರ5) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) ವಿಭಕ್ತಿ ಎಂದರೇನು? ಕೇಶಿರಾಜನು ಹೇಳಿರುವ ವಿಭಕ್ತಿಗಳನ್ನು ಕುರಿತು ಬರೆಯಿರಿ.

೨) ಕೇಶಿರಾಜನು ಹೇಳಿರುವ ಸಂಧಿ ನಿಯಮಗಳನ್ನು ಸೋದಾಹರಣವಾಗಿ ವಿವರಿಸಿ.

ಪ್ರ6) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **[2×15=10]**

೧) ನಾಮಲಿಂಗ

೨) ನಾಮಿ

೩) ಅಪಭ್ರಂಶ ಪ್ರಕರಣ

೪) ಅಧ್ಯಾರೋಪ

ವಿಭಾಗ–ಸಿ

(ಕನ್ನಡ ಭಾಷೆಯ ಚರಿತ್ರೆ : 30 ಅಂಕಗಳು)

ಪ್ರ7) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) ಭಾಷೆಯ ಸ್ವರೂಪ ಮತ್ತು ಲಕ್ಷಣಗಳನ್ನು ವಿವರಿಸಿ.

೨) ಭಾಷೆಯ ಲಕ್ಷಣಗಳನ್ನು ವಿವಿಧ ಭಾಷಾ ವಿಜ್ಞಾನಿಗಳ ವ್ಯಾಖ್ಯೆಯೊಂದಿಗೆ ವಿವರಿಸಿ.

ಪ್ರ8) ಒಂದನ್ನು ಕುರಿತು ಟಿಪ್ಪಣಿ ಬರೆಯಿರಿ: **[1×5=5]**

೧) ಉತ್ತರ ದ್ರಾವಿಡ ಭಾಷೆಗಳು

೨) ಕನ್ನಡ ನಾಡು–ನುಡಿಯ ಪ್ರಾಚೀನತೆ

೩) ಭಾಷಾ ಸ್ವೀಕರಣ.

ಪ್ರ9) ಒಂದು ಪ್ರಶ್ನೆಗೆ ಉತ್ತರಿಸಿ: **[1×10=10]**

೧) ನಾಮಪದ ಎಂದರೇನು? ಎಷ್ಟು ವಿಧಗಳಿವೆ? ಸೋದಾಹರಣವಾಗಿ ವಿವರಿಸಿ.

೨) ಪ್ರಾಂತಭೇದ ಎಂದರೇನು? ಕನ್ನಡದ ಪ್ರಾಂತಭೇದಗಳನ್ನು ಕುರಿತು ಬರೆಯಿರಿ.

ಪ್ರ10)ಒಂದನ್ನು ಕುರಿತು ಟಿಪ್ಪಣಿ ಬರೆಯಿರಿ: **[1×5=5]**

೧) ಕನ್ನಡ ಭಾಷೆಯ ವಿವಿಧ ಹಂತಗಳು

೨) ಇಂಡೋ ಯುರೋಪಿಯನ್ ಭಾಷಾ ಪರಿವಾರ

೩) ಆಕಾಶವಾಣಿ, ಕಛೇರಿ, ಕಾಗದ, ಹಣ್ಣುಹಂಪಲು–ಇವುಗಳನ್ನು ಭಾಷಾಶಾಸ್ತ್ರದ ದೃಷ್ಟಿಯಿಂದ ವಿವರಿಸಿ.